# ದೃಷ್ಟಿಯಿಂದ ದೂರ

ಯಾರು ಪರಿಪೂರ್ಣ ಪ್ರವಾಸಿಗ? ಅವನ ಗುಣಲಕ್ಷಣಗಳೇನು? ಇದಕ್ಕೆ ನಮ್ಮ ಉತ್ತರವೇನೆಂದರೆ ತೋಳಿಲ್ಲದ ಟಿ–ಶರ್ಟ್ ಅಥವಾ ಚಡ್ಡಿಯನ್ನು ತಣ್ಣಗಿನ ಚಳಿ ಪ್ರದೇಶಕ್ಕೆ, ಚಳಿಗಾಲದ ಬಟ್ಟೆಯನ್ನು ಬಿಸಿಲಿನ ಜಾಗಗಳಿಗೆ ತೆಗೆದುಕೊಂಡು ಹೋಗುವವ, ರಾಜಧಾನಿಯ ಬದಲು ಆಗಸ್ಟ್ ಕ್ರಾಂತಿ ಎಕ್ಸ್‌ಪ್ರೆಸ್ ಹತ್ತುವವ, ಸಿಂಗಾಪುರಕ್ಕೆ ಹೋಗಲು ದೇಶೀಯ ವಿಮಾನ ನಿಲ್ದಾಣಕ್ಕೆ ಹೋಗುವವ, ಪ್ರವಾಸದಲ್ಲಿ ಕ್ಯಾಮೆರಾ ಅಥವಾ ಹಿಂತಿರುಗಿ ಬರುವ ಟಿಕೇಟನ್ನು ಕಳೆದುಕೊಳ್ಳುವವ ಅಥವಾ ಅಂಗಡಿಯಲ್ಲಿ ಕೊಂಡುಕೊಳ್ಳುವಾಗ ಡಾಲರ್‌ಗಳ ಬದಲು ಪೌಂಡ್ಸ್ ಕೊಡುವವ ಎಂದು.

ಈ ತಮಾಷೆಯನ್ನು ಬಿಟ್ಟು ನೋಡಿದರೆ ಆಗಾಗ ಇಂತಹ ಅನುಭವಗಳು ನಿಮಗೂ ಮತ್ತು ನನಗೂ ಆಗುತ್ತವೆ. ಒತ್ತಡ ತುಂಬಿದ ಜೀವನದ ಮಧ್ಯೆ ಕೆಲ ಸಮಯ ನಾವು ಮರೆಗುಳಿ ಪ್ರೊಫೆಸರ್ ಆಗಿಬಿಡುತ್ತೇವೆ ಮತ್ತು ನಂತರ ಸಮಸ್ಯೆಗಳನ್ನು ಅಥವಾ ಅವಗಡದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಕೆಲವು ಬಾರಿ ನಾವು ಮರೆಯುತ್ತೇವೆ ಅಥವಾ ಕೆಲವೊಮ್ಮೆ ನಮ್ಮ ವಸ್ತುಗಳು ಕಳೆದು ಹೋಗುತ್ತವೆ. ಬದಲಾಗುತ್ತಿರುವ ತಂತ್ರಜ್ಞಾನದ ಜೊತೆ ಕಳ್ಳರ ಸಂಖ್ಯೆಯೂ ಹೆಚ್ಚುತ್ತಿದೆ ಮತ್ತು ಅವರ ತಂತ್ರಗಳೂ ಕೂಡ. ಆದ್ದರಿಂದ ಪ್ರವಾಸದ ಸಮಯದಲ್ಲಿ ಜಾಗರೂಕತೆಯಿಂದ ಇರುವುದು ಯಾವಗಲೂ ಉತ್ತಮ.

ಇತ್ತೀಚೆಗೆ ನನ್ನ ಗೆಳತಿಯೊಬ್ಬರು ಕಾನ್ಫರೆನ್ಸ್ ಮುಗಿಸಿ ಸ್ಪೇನ್‌ನಿಂದ ಬರುವಾಗ ಇಂಥದ್ದೊಂದು ದೊಡ್ಡ ಆಘಾತಕ್ಕೆ ಒಳಗಾದರು. ಒಂದು ಬಫೆ ಊಟದಲ್ಲಿ ಎರಡನೇ ಬಾರಿ ಪದಾರ್ಥ ಹಾಕಿಕೊಳ್ಳಲು ಒಂದೇ ಒಂದು ನಿಮಿಷಕ್ಕೆ ಎದ್ದು ಹೋದಾಗ ಆಕೆಯ ಯುಎಸ್ ವೀಸಾ, ಪಾಸ್‌ಪೋರ್ಟ್ ಮತ್ತು 1200 ಯೂರೋ ಹಣ, ದುಬಾರಿ ಮೊಬೈಲ್ ಮತ್ತು ಹಿಂತಿರುಗಿ ಬರಲು ಟಿಕೆಟಿದ್ದ ಪರ್ಸ್ ಕಳುವಾಯಿತು. ಅಕೆ ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟರೂ ಏನೂ ಉಪಯೋಗವಾಗಲಿಲ್ಲ. ಹಣ ಹೋದುದರ ಜೊತೆಗೆ ಅತ್ಯಂತ ಒತ್ತಡವನ್ನೂ ಅನುಭವಿಸಬೇಕಾಯಿತು. ಮತ್ತೊಬ್ಬ ಪ್ರವಾಸಿಗರಿಗೂ ಹೀಗೆಯೇ ಆಗಿ ಹಣ ಹೋದರೂ ಅದೃಷ್ಟವಶಾತ್ ಪ್ಯಾರಿಸ್ಸಿನ ಹೋಟೆಲ್ ಕಸದಬುಟ್ಟಿಯಲ್ಲಿ ಪಾಸ್‌ಪೋರ್ಟ್ ಸಿಕ್ಕಿತು.

ಇಂತಹ ಘಟನೆಗಳ ಪ್ರಮಾಣ ಹೆಚ್ಚಾಗಲು ಆರಂಭವಾಗಿದೆ ವಿಶೇಷವಾಗಿ ಇಟಲಿ ಮತ್ತು ಪ್ಯಾರಿಸ್‌ನಲ್ಲಿ ಪ್ರವಾಸಿಗರು ಕುಖ್ಯಾತ ಕಳ್ಳರಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಎಚ್ಚರಿಕೆಯಿಂದಿರುವುದು ಒಳ್ಳೆಯದು. ಕೆಲವು ಸಲ ಗರ್ಭಿಣಿ ಮಹಿಳೆ ನಮ್ಮ ಪಕ್ಕಕ್ಕೆ ಬರುತ್ತಾರೆ. ನಾವು ಆಕೆಯೊಂದಿಗೆ ಕರುಣೆಯಿಂದ ನಡೆದುಕೊಳ್ಳುತ್ತಿದ್ದರೆ ನಮಗೇ ಗೊತ್ತಿಲ್ಲದಂತೆ ನಮ್ಮ ಪರ್ಸನ್ನು ಎತ್ತುತ್ತಾರೆ. ಹಾಗಂತ ಬೇರೆ ಗರ್ಭಿಣಿ ಸ್ತ್ರೀಯರ ಬಗ್ಗೆಯೂ ಹಾಗೆಯೇ ಯೋಚಿಸಲು ಬರುವುದಿಲ್ಲ. ನಮ್ಮ ವಸ್ತುಗಳ ಬಗ್ಗೆ ಎಚ್ಚರಿಕೆಯಿಂದಿರುವುದು ಮುಖ್ಯ.

ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳು ಹೆಚ್ಚಾಗಿ ಪರ್ಸನ್ನು ಕಳೆದುಕೊಳ್ಳುವ ಸಾಮಾನ್ಯ ಸ್ಥಳ. ಕೆಲವು ಬಾರಿ ನಾವು ಫೋಟೋ ತೆಗೆಯಲು ಪರ್ಸನ್ನು ಪಕ್ಕಕ್ಕೆ ಇಡುತ್ತೇವೆ ಮತ್ತು ಅದು ಕಳುವಾಗುತ್ತದೆ. ವಸ್ತುಗಳನ್ನು ಕಳೆದುಕೊಳ್ಳುವ ಇನ್ನೊಂದು ಸಾಮಾನ್ಯ ಜಾಗವಾದ ಯುರೋ–ರೈಲ್ ಅಥವಾ ಟಿವಿಜಿ ತರಹದ ರೈಲಿನಲ್ಲಿ, ಎಲ್ಲಾ ಪ್ರವಾಸಿಗರ ಪಾಸ್‌ಪೋರ್ಟ್ ಹೊಂದಿರುವ ನಮ್ಮ ವೃತ್ತಿಯ ಗೆಳೆಯರೊಬ್ಬರ ಪರ್ಸ್, ಭಾರದ ಚೀಲಗಳನ್ನು ಮೇಲೆ ಇಟ್ಟು ಕೆಳಗೆ ಸೀಟಿನತ್ತ ನೋಡುವಷ್ಟರಲ್ಲಿಯೇ ಕಳುವಾಗಿತ್ತು. ಅವಳಿಗೆ ಅದೆಷ್ಟು ಕಷ್ಟವಾಗಿರಬಹುದೆಂದು ಊಹಿಸಬಹುದು. ಸ್ನೇಹಿತರೇ, ಆದ್ದರಿಂದ ಯಾವಾಗಲೂ ಪ್ರೇಕ್ಷಣೀಯ ಸ್ಥಳ ನೋಡುವಾಗ ಅಥವಾ ಚಿತ್ರ ತೆಗೆಯುವಾಗ ಪಕ್ಕಕ್ಕೆ ಇಡಬೇಕಾದ ಅಗತ್ಯವಿಲ್ಲದ ನಿಮ್ಮ ಕುತ್ತಿಗೆಯ ಸುತ್ತ ನೇತಾಡುವ ಪರ್ಸನ್ನು ಇಟ್ಟುಕೊಳ್ಳಿ.

ಟ್ರಾವೆಲರ್ಸ್ ಚೆಕ್ ಅಥವಾ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡನ್ನು ತೆಗೆದುಕೊಳ್ಳಿ. ಇರುವ ಒಟ್ಟು ಹಣವನ್ನು ಒಂದೇ ಕಡೆ ಇಡಲೇಬೇಡಿ ನಿಮ್ಮ ಜೊತೆಗಾರರೊಂದಿಗೆ ಹಂಚಿಕೊಳ್ಳಿ ಅಥವಾ ನಿಮ್ಮದೇ ಬೇರೆ ಬೇರೆ ಚೀಲಗಳಲ್ಲಿಡಿ ಅಥವಾ ಹೋಟೆಲ್‌ನ ಲಾಕರ್‌ನಲ್ಲಿ ಇಡಿ. ಪದೇ ಪದೇ ಮರೆಯುವ ಮತ್ತೊಂದು ವಸ್ತುವೆಂದರೆ ಕನ್ನಡಕ. ಆದ್ದರಿಂದ ಎರಡು ಕನ್ನಡಕಗಳನ್ನು ಇಟ್ಟುಕೊಳ್ಳುವುದು ಒಳ್ಳೆಯದು ಆದರೆ ಒಬ್ಬ ಪರಿಪೂರ್ಣ ಪ್ರವಾಸಿಗ ಎರಡನೆಯದನ್ನೂ ಮರೆಯುವುದಿಲ್ಲ ಎಂದು ಹೇಳಬಹುದು.

**ವೀಣಾ ಪಾಟೀಲ್**
ವ್ಯವಸ್ಥಾಪಕ ನಿರ್ದೇಶಕಿ–ಕೇಸರಿ




ಸಂತೋಷದ ರಜಾ ದಿನಗಳು
@
ಸಂತೋಷದ ದರಗಳಲ್ಲಿ!

Bengaluru 4128 2222

KESARI
World Class Travel Company

| ಪ್ರವಾಸ ಹೆಸರು | ದಿನಗಳು | ಕೋಡ್ | ದಿನಾಂಕ | ದರ | ರಿಯಾಯಿತಿ ದರ* |
|---|---|---|---|---|---|
| ಥೈಲ್ಯಾಂಡ್ ಬ್ಯಾಂಕಾಕ್ ಪಟ್ಟಾಯ--- | 5 | QT | 25 ಡಿಸೆಂ | ~~34990~~ | 32990 |
| ಸಿಂಗಪುರ್ ಮಲೇಶಿಯಾ-------- | 6 | Q8 | 24 ಡಿಸೆಂ | ~~60990~~ | 56990 |
| ಸಿಂಗಪುರ್ ಥೈಲ್ಯಾಂಡ್ ಮಲೇಶಿಯಾ | 8 | Q3 | 27 ಡಿಸೆಂ | ~~77990~~ | 69990 |
| ಸಿಂಗಪುರ್ ಥೈಲ್ಯಾಂಡ್ ಮಲೇಶಿಯಾ | 10 | Q4 | 24 ಡಿಸೆಂ | ~~80990~~ | 76990 |
| ಸಿಂಗಪುರ್ ಥೈಲ್ಯಾಂಡ್‌ಮಲೇಶಿಯಾ ಜೊತೆ ಸ್ಟಾರ್ ಕ್ರೂಸ್ | 8 | Z2 | 28 ಡಿಸೆಂ | | 78990 |

*USD=₹50. Prevailing rates will apply. Terms & Conditions Apply

Advt.

Above Tours are Ex-Bengaluru departures. (Z2 is Ex Mumbai) • www.kesari.in • SMS KESARI <space> your message to 56677 • Toll free 1800 22 1100